8

# ಕ್ರಿಸ್ತನು ಬರುತ್ತಾನೆ!

### ಓದುವ ಮನೆಪಾಠ #1

I. ಯೇಸುವಿನ ಸೇವೆಯ ಹಿಂದಿನ ಕಾಲಮಾನ.
   A. ಲೂಕನು ನೀಡಿದ ಪೀಠಿಕೆ ಹಾಗೂ ಸಮರ್ಪಣೆ (ಲೂಕ 1:1-4).
   B. ಯೋಹಾನನು ನೀಡಿದ ಪೀಠಿಕೆ (ಯೋಹಾನ 1:1-18).
   C. ಮತ್ತಾಯನು ನೀಡಿದ, ಯೇಸುವಿನ ವಂಶಾವಳಿ (ಮತ್ತಾಯ 1:1-17).
   D. ಲೂಕನು ನೀಡಿದ ಯೇಸುವಿನ ವಂಶಾವಳಿ (ಲೂಕ 3:23-38).
   E. ಸ್ನಾನಿಕನಾದ ಯೋಹಾನನ ಜನನದ ಕುರಿತು ದೇವದೂತರು ಜಕರಿಯನಿಗೆ ಮಾಡಿದ ಪ್ರಕಟನೆ (ಲೂಕ 1:5-25).
   F. ಯೇಸುವಿನ ಜನನದ ಕುರಿತು ದೇವದೂತರು ಮರಿಯಳಿಗೆ ತಿಳಿಸಿದ ಪ್ರಕಟನೆ (ಲೂಕ 1:26-38).
   G. ಮರಿಯಳು (ಯೇಸುವಿನ ತಾಯಿಯಾಗಲಿದ್ದ) ಎಲಿಜಬೇಳನ್ನು (ಯೋಹಾನನ ತಾಯಿ) ಸಂಧಿಸಿದ್ದು (ಲೂಕ 1:39-56).[1]
   H. ಸ್ನಾನಿಕನಾದ ಯೋಹಾನನ ಜನನ ಹಾಗೂ ಅವನ ಜೀವನ ಚರಿತ್ರೆಯ ಪ್ರಥಮ ಹಂತ (ಲೂಕ 1:57-80).

## ಪೀಠಿಕೆ (ಲೂಕ 1:1-4)

ಲೂಕನು ತನ್ನ ಪ್ರಸ್ತಾಪವನ್ನು ಪರಿಚಯಿಸಿ, "ನಿನಗೆ ಉಪದೇಶಿಸಿರುವ ವಿಷಯಗಳು ... ಯಥಾರ್ಥವಾದವುಗಳೆಂದು ಇದರಿಂದ ನೀನು ... ಗೊತ್ತು ಮಾಡಿಕೊಳ್ಳಬಹುದು" (ವಚನಗಳು 3, 4).[2] ಆದ್ದರಿಂದ ಯೇಸುವಿನ, "ಈ ಪರಿಪೂರ್ಣ ಸತ್ಯವನ್ನು" ನೀವುಗಳು ಅರಿಯುವ ನಿಮಿತ್ತ ಈ ಅಧ್ಯಯನವನ್ನು ನೀಡಲಾಗಿದೆ. ಆತನ ಜನನದ ಮೊದಲಿನ ಸಂಗತಿಗಳನ್ನು ತಿಳಿಸಲಾಗಿದೆ. "ಕ್ರಿಸ್ತನು ಬರುತ್ತಾನೆ" ಎಂಬದೆ ಈ ಅಧ್ಯಯನದ ಮುಖ್ಯ ಪ್ರಸ್ತಾಪವಾಗಿದೆ.

## ಜನನದ ಮೊದಲು ಆತನು ಇದ್ದವನು ಎಂದು ಒತ್ತಿ ಹೇಳಲಾಗಿದೆ (ಯೋಹಾನ 1:1-18)[3]

ಕ್ರಿಸ್ತನ ಜೀವನದ ಕುರಿತು ಆಲೋಚಿಸುವಾಗ, ಆತನ ಬೆತ್ಲೆಹೇಮಿನ ಜನನದಿಂದ ನಾವುಗಳು ಆರಂಭಿಸುತ್ತೇವೆ. ಆದರೆ ಆತನು ಬಹಳ ಹಿಂದೆಯೇ ಇದ್ದವನು ಎಂದು ಯೋಹಾನನು ತಿಳಿಸಿರುವನು. ಆತನು ದೇವರಾಗಿರುವದರಿಂದ ಜಗದುತ್ಪತ್ತಿಗೆ ಮೊದಲೆ ಇದ್ದವನು:

> ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು.[4] ಆತನ ಮೂಲಕವಾಗಿ ಸಮಸ್ತವು ಉಂಟಾಯಿತು; ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ (ಯೋಹಾನ 1:1-3).

"ದೈವತ್ವ" ಎಂಬ ಸಿದ್ಧಾಂತದಲ್ಲಿರುವ ಮೂರು ದೈವತ್ವಗಳಲ್ಲಿ, KJVಯಲ್ಲಿ ಯೇಸು ಸಹ ಒಬ್ಬನಾಗಿರುವನು (ಅಪೊಸ್ತಲರ ಕೃತ್ಯಗಳು 17:29; ರೋಮಾಪುರ 1:20; ಕೊಲಸ್ಸೆ 2:9). ಮತ್ತಾಯ 28:19ರಲ್ಲಿ: ತಂದೆ ಮಗ ಹಾಗೂ ಪವಿತ್ರಾತ್ಮ ಎಂದು ತಿಳಿಸಲಾಗಿದೆ. ಯೇಸು ದೇವರಾಗಿರುವನು ಎಂಬ ತತ್ವವನ್ನು ಅತಿ ಸರಳವಾಗಿ ಅರಿಯಲು ಅಸಾಧ್ಯ. "ದೇವರ" ವಾಕ್ಯದ ಬಳಕೆಯಲ್ಲಿ ದೇವರನ್ನು ತಂದೆಯೆಂದು ಪ್ರಬೋಧಿಸುತ್ತೇವೆ. ಈಗ ದೇವರ ಮಗನಾದ ಯೇಸುವನ್ನು ದೇವರೆಂದು ಪರಿಗಣಿಸಿರಿ. ಮುಂದಿನ ಸರಣಿಯಲ್ಲಿ ಯೇಸುವಿನ ದೈವತ್ವದ ಕುರಿತು ಮುಂದುವರೆಸಲಾಗುವದು.

ಯೇಸುವಿನ ಕುರಿತಾಗಿ ಆಲೋಚಿಸುವಾಗೆಲ್ಲಾ, ಯೇಸುವನ್ನು "ಕ್ರಿಸ್ತನೆಂದೆ" ಪ್ರಬೋಧಿಸುತ್ತೇವೆ. ಆದರೆ ದೇವದೂತನು ಯೇಸುವಿನ ಜನನದ ಕುರಿತಾಗಿ ಮರಿಯಳೊಂದಿಗೆ ಮಾತನಾಡುವಾಗ, "ನೀನು *ಆತನನ್ನು* ಯೇಸು" ಎಂದು ಕರೆಯ ಬೇಕೆಂದು ತಿಳಿಸಿದನು (ಮತ್ತಾಯ 1:21; ಒತ್ತಿ ಹೇಳಿದ್ದು ನನ್ನದು). ದೀಕ್ಷಾಸ್ನಾನದ ಸಮಯದಲ್ಲಿ ದೇವರು ಯೇಸುವನ್ನು ಆತ್ಮನಿಂದ ಅಭಿಷೇಕ ಮಾಡಿದ್ದರಿಂದ ಆತನನ್ನು "ಕ್ರಿಸ್ತ"ನೆಂದು ಕರೆಯಲಾಗಿತು (ಲೂಕ 4:18; ಅಪೊಸ್ತಲರ ಕೃತ್ಯಗಳು 10:38). ದೀಕ್ಷಾಸ್ನಾನ ಹೊಂದಿದನು ("ಅಭಿಷೇಕಿಸಿದವನು") (ಮತ್ತಾಯ 3:13-17). ಯೇಸು ಭೂಮಿಯಲ್ಲಿ ತನ್ನ ಕಾರ್ಯವನ್ನು ಮಾಡುವ ಮೊದಲು ಆತನಿಗೆ ಯಾವ ಹೆಸರನ್ನು ನೀಡಲಾಗಿತ್ತು?[5]

ಯೇಸು ಲೋಕಕ್ಕೆ ಬರುವ ಮೊದಲು ಯೋಹಾನನು, ಯೇಸು ಲೋಗೋಸ್[6] - "ವಾಕ್ಯವಾಗಿದ್ದನು" ಎಂದು ತಿಳಿಸಿದನು ಅಥವಾ "ಕ್ರಿಸ್ತನು" ಎಂಬ ನಾಮ. ಕ್ರಿಸ್ತನು ಈ ಲೋಕಕ್ಕೆ ದೇವರ ವಾಕ್ಯವಾಗಿ ಇಳಿದು ಬಂದು ತನ್ನ ವ್ಯಕ್ತಿತ್ವವನ್ನು ಪ್ರಕಟಿಸಿದನು. ಯೋಹಾನ 1:18ರಲ್ಲಿ, "ದೇವರನ್ನು ಯಾರು ಎಂದು ಕಂಡಿಲ್ಲ; ಯಾವನು ಏಕಪುತ್ರನು ಸ್ವಂತ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು." ಫಿಲಿಪ್ಪಿನಿಗೆ ಆತನು, "ನನ್ನನ್ನು ನೋಡಿದವನು ... ತಂದೆಯನ್ನು ನೋಡಿದ್ದಾನೆ ..." ಅಂದನು (ಯೋಹಾನ 14:9).

14ನೇ ವಚನದ ಯೋಹಾನನ ವಿಶೇಷ ಹೇಳಿಕೆಯಲ್ಲಿ "ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು. ಅದನ್ನು ನಾವು ಮಾಂಸದಾರಿಯಾದವನು ಎನ್ನುತ್ತೇವೆ" (ಲೀಟೀನ್ ಭಾಷೆಯಲ್ಲಿ "ಮಾಂಸವಾದವನು" ಎಂಬ ಅರ್ಥ[7]). ಮಾಂಸದಾರಿಯಾದನು ಎಂಬುದಕ್ಕೆ ಫಿಲಿಪ್ಪಿ 2:5-8 ಗುರುತರ ವ್ಯಾಖ್ಯಾನವಾಗಿದೆ. ಈ ವಿಚಾರವನ್ನು ಅರಿಯುವದು ಕಷ್ಟಕರವಾದರೂ, "ವಾಕ್ಯವು ನರಾವತಾರವಾದನು" ಎಂಬ ಸತ್ಯವನ್ನು ನಂಬಿಕೆಯಿಂದ ಸ್ವೀಕರಿಸುತ್ತೇವೆ. ಈ ಕುರಿತು ಇಬ್ರಿಯ ಗ್ರಂಥಕತೃ ಬರೆದು,

> ... ಆದದರಿಂದ ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗ ಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣ ಮಾಡುವದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾ ಯಾಜಕನಾದನು. ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿಸಲ್ಪಡುವವರಿಗೆ ಸಹಾಯ ಮಾಡುವದಕ್ಕೆ ಶಕ್ತನಾಗಿದ್ದಾನೆ (ಇಬ್ರಿಯ 2:17, 18).

ತನ್ನ ಪೀಠಿಕೆಯಲ್ಲಿ ಯೋಹಾನನು ಇನ್ನು ಹೆಚ್ಚಾಗಿ ಬರೆಯಲು ಕಾತರಪಟ್ಟನು. (1) ಯೇಸು ಬೆಳಕಾಗಿದ್ದಾನೆ (ಪ್ರಕಾಶದ ಮೂಲ) (ವಚನಗಳು 4, 5, 9; ಇದನ್ನು ನೋಡಿ ವಚನಗಳು 16-18).[8] (2) ಯೇಸು ಬರುವ ಮೊದಲು ಪ್ರವಾದಿಯು "ಆತನಿಗೆ ಸಾಕ್ಷಿಯಾದನು" (ವಚನಗಳು 6-8, 15). (3) ಕತ್ತಲ ಲೋಕವು ಆ ಬೆಳಕನ್ನು "ನಿರಾಕರಿಸಿತು" (ವಚನಗಳು 5, 10, 11). (4) ಅದರಲ್ಲಿ ಕೆಲವರು ನಂಬಿಕೆಯಿಂದಲೂ, ಹೊಸದಾಗಿ ಹುಟ್ಟುವದರಿಂದಲೂ ಆ ಬೆಳಕನ್ನು ಅಂಗೀಕರಿಸಿದರು[9] (ವಚನಗಳು 12, 13). ಸದ್ಯಕ್ಕೆ ನಾವು ಯೇಸು ಲೋಕಕ್ಕೆ

ಬರುವ ಮೊದಲು ಏನಾಗಿದ್ದನು ಎಂಬ ಅಂಶವು ನಮಗೆ ಪ್ರಮುಖವಾಗಿದೆ.

## ನೆರವೇರಿದ ಪ್ರವಾದನೆಗಳು
## (ಮತ್ತಾಯ 1:1-17 ಲೂಕ 3:23-38)

### ಮತ್ತಾಯನು ತಿಳಿಸಿದ ವಂಶಾವಳಿ (ಮತ್ತಾಯ 1:1-17)

ಲೂಕ ಮತ್ತು ಯೋಹಾನರು ತಿಳಿಸಿರುವಂತೆ, ಮತ್ತಾಯನು ತಿಳಿಸಿರುವದಿಲ್ಲ. ಯೆಹೂದ್ಯರು ನಿರೀಕ್ಷಿಸಿದ ಮೆಸ್ಸೀಯನು "ಯೇಸುವೇ" ಎಂದು ತಿಳಿಸಿದನು. "ಆತನು ದಾವೀದನ ವಂಶದವನು ದಾವೀದನು ಅಬ್ರಹಾಮನ ವಂಶದವನು ಎಂದು ಆರಂಭಿಸಿದನು" (ವಚನ 1). ಕೆನ್ ಗೈರ್‌ರವರ ಪ್ರಕಾರ, "ಮತ್ತಾಯನು ಕುಟುಂಬದ ಒಂದು ಮರದ ಚಿತ್ರಣವನ್ನು ನೀಡಿರುವನು. ಆ ಮರವು ಮೂಲ ಪಿತೃವಾದ ಅಬ್ರಹಾಮನಲ್ಲೂ ಹಾಗೂ ಮಹಾರಾಜನಾದ ದಾವೀದನಲ್ಲೂ ಬೇರು ಹೊಂದಿತ್ತು."[10] ಹಳೇ ಒಡಂಬಡಿಕೆಯ ಪ್ರವಾದನೆಗಳ ಪ್ರಕಾರ, ಮೆಸ್ಸೀಯನು ಅಬ್ರಹಾಮನ ಹಾಗೂ ದಾವೀದನ ವಂಶದವನೇ ಆಗಿರಬೇಕಿತ್ತು (ಆದಿಕಾಂಡ 22:18; ನೋಡಿರಿ ಗಲಾತ್ಯ 3:16) ಮತ್ತು ಸಹ ಡೇವಿಡ್ (ನೋಡಿರಿ 2 ಸಮುವೇಲ 7:16; ಯೋಹಾನ 7:42).

ಆದ್ದರಿಂದ ಮತ್ತಾಯನು ಅಬ್ರಹಾಮನ ಕುಟುಂಬದ ಮರದಿಂದ ಆ ವಂಶಾವಳಿಯನ್ನು ದಾಖಲು ಮಾಡಿರುವನು (ವಚನ 2), ದಾವೀದನಿಂದ ಯೇಸುವಿನವರೆಗೆ (ವಚನಗಳು 6, 7), ಮುಂದುವರೆಸಿದನು (ವಚನ 16). ಅವನ ಪಟ್ಟಿಯನ್ನು ಮೂರು ಭಾಗಗಳಾಗಿ ಮಾಡಲಾಗಿದೆ - (1) ಅಬ್ರಹಾಮನಿಂದ ದಾವೀದನವರೆಗೆ, (2) ದಾವೀದನಿಂದ ಸೆರೆಯಾಗುವವರೆಗೆ, ಮತ್ತು (3) ಸೆರೆಯಿಂದ ಯೇಸುವಿನವರೆಗೆ (ವಚನ 17).[11] ಮೊದಲ ಹಾಗೂ ಎರಡನೇ ಭಾಗದ ಹದಿನಾಲ್ಕು ಹೆಸರುಗಳೊಂದಿಗೆ ದಾವೀದನ ಹೆಸರನ್ನು ಸೇರಿಸಲಾಗಿದೆ. ಈ ಎರಡು ಭಾಗಗಳಲ್ಲೂ ಆತನ ಹೆಸರಿರುವದರಿಂದ, ದೇವರ ಉದ್ದೇಶಗಳನ್ನು ಈಡೇರಿಸುವಲ್ಲಿ ದಾವೀದನು ಪ್ರಮುಖ ಪಾತ್ರವನ್ನು ಹೊಂದಿದ್ದನು ಎಂದು ಕಂಡುಬರುತ್ತದೆ.

ಮತ್ತಾಯ 1:1-17ರಲ್ಲಿ, ಹಳೇ ಒಡಂಬಡಿಕೆಯ ಪ್ರಮುಖ ಹೆಸರುಗಳನ್ನು ಕಾಣುವ ಮೊದಲು, ಮತ್ತಾಯನು ತಿಳಿಸಿರುವ ವಂಶಾವಳಿಯು ಹೆಚ್ಚು ಆಸಕ್ತಿಕರವಾಗಿರುವದಿಲ್ಲ. F. ಲಗಾರ್ಡ್ ಸ್ಮಿಥ್‌ರವರು, ಬರೆದು,

> ಮತ್ತಾಯನು ತಿಳಿಸಿರುವ ವಂಶಾವಳಿಯಲ್ಲಿ ಅನೇಕ ಆಶ್ಚರ್ಯಗಳು ಲಭಿಸುತ್ತವೆ. ಯೇಸುವಿನ ಹಿನ್ನೆಲೆಯಲ್ಲಿ ನೀತಿವಂತರಾದ ಜನರು ಮಾತ್ರವಿರದೆ, ಅನೀತಿವಂತರಾಗಿದ್ದವರ ಕೆಲವು ಹೆಸರುಗಳನ್ನು ಸಹ ದಾಖಲಿಸಿದೆ. ಅದರಲ್ಲಿ ಮನಸ್ಸೆಯ ಹೆಸರನ್ನು ಸಹ ಕಾಣುತ್ತೇವೆ. ಯೆಹೂದ್ಯರು ಮಾತ್ರವಲ್ಲದೆ, ಕಾನಾನ್ಯರು ಹಾಗೂ ಮೊವಾಬ್ಯರು ಎಂಬ ಅನ್ಯರ ಹೆಸರುಗಳು ಸಹ ಇರುತ್ತವೆ. ಇವರು ದೇವ ಜನರಿಗೆ ಕಡು ವೈರಿಗಳಾಗಿದ್ದರು. ಸಾಮಾಜಿಕವಾಗಿ ಕೀಳರಿಮೆ ಹೊಂದಿದ ಸ್ತ್ರೀಯರ ಹಾಗೂ ಪುರುಷರ ಹೆಸರುಗಳಿವೆ. ಪಾಪಕ್ಕೆ ಪ್ರಸಿದ್ದಿ ಹೊಂದಿದ್ದ ಇಬ್ಬರು ಸ್ತ್ರೀಯರ ಹೆಸರನ್ನು ಸಹ ವಂಶಾವಳಿಯಲ್ಲಿ ಗಮನಿಸುತ್ತೇವೆ.[12]

ಅವರಲ್ಲಿ ಕೆಲವರು ಪ್ರಖ್ಯಾತಿಗೊಂಡವರು, ಪ್ರಖ್ಯಾತಿ ಹೊಂದದವರೂ ಇದ್ದರೂ, ಅವರಲ್ಲಿ ಅಯೋಗ್ಯರಾದವರೂ ಇದ್ದರು. ಗೈರರವರ ಪ್ರಕಾರ "ರಕ್ಷಕನ ಕುಟುಂಬದ ಮರವು ಸಹ ನಾಶವಾದ, ಫಲಕೊಡದ, ಭಾಗಿದ ಹಾಗೂ ಜಜ್ಜಿ ಹೋದ ಕೊಂಬೆಗಳನ್ನು ಒಳಗೊಂಡಿತ್ತು."[13] ದೇವರು ತನ್ನ ಉದ್ದೇಶಗಳನ್ನು ಬಲಹೀನವಾದ (ಬಂಜೆಯಾದ) ಸಂಗತಿಗಳಿಂದ ಸಾಧಿಸುವನು ಎಂಬ ಅಂಶಕ್ಕೆ ಮತ್ತಾಯನು ಉದಾರವಾದ ವಂಶಾವಳಿಯನ್ನು ತಿಳಿಸಿರುವನು!

**ಲೂಕನು ಪ್ರಕಾರದ ವಂಶಾವಳಿ (ಲೂಕ 3:23-38)**

ಲೂಕನು ಆರಂಭದಲ್ಲಿಯೇ ವಂಶಾವಳಿಯ ಕುರಿತು ತಿಳಿಸಿರುವದಿಲ್ಲ. ಅಧ್ಯಾಯ 3ರಲ್ಲಿ ಅದನ್ನು ತಿಳಿಸಿ, ಅದರಲ್ಲಿ ಮತ್ತಾಯನಲ್ಲಿದ್ದ ಉದ್ದೇಶಗಳನ್ನು ತಿಳಿಸಿರುವದಿಲ್ಲ. ಮತ್ತಾಯನು ಅಬ್ರಹಾಮನಿಂದ ಆರಂಭಿಸಿ (ಮತ್ತಾಯ 1:1, 2). ಯೆಹೂದ್ಯರ ಅರಸು ತನಕ್ಕೆ ಯೇಸುವನ್ನು ಸಂಬಂಧಿಸಿರುವನು. ಲೂಕನು ತಿಳಿಸಿರುವ ಯೇಸುವಿನ ಲೋಕಕ್ಕೆ ಸಂಬಂಧ ಪಟ್ಟ ಸಂಬಂಧವು ಅಬ್ರಹಾಮನಲ್ಲಿ ಅಂತ್ಯಗೊಳ್ಳುತ್ತದೆ (ಲೂಕ 3:38) ಹಾಗೂ ಯೇಸುವಿನ ಸಂಬಂಧವನ್ನು ಜನರೊಂದಿಗೆ ಸಂಬಂಧಿಸಲಾಗಿದೆ.


ಮತ್ತಾಯ ಮತ್ತು ಲೂಕರು ತಿಳಿಸಿರುವ ವಂಶಾವಳಿಗಳ ನಡುವೆ ಬಂದು ವಿಶೇಷವಾದ ವ್ಯತ್ಯಾಸವಿದೆ. ಆತನು ಅಬ್ರಹಾಮನ ಹಾಗೂ ದಾವೀದನ ವಂಶದವನು ಎಂದು ಇಬ್ಬರೂ ತಿಳಿಸಿರುವರು (ಮತ್ತಾಯ 1:2; ಲೂಕ 3:34), ಮತ್ತು ಡೇವಿಡ್ (ಮತ್ತಾಯ 1:6; ಲೂಕ 3:31), ಆದರೆ ಇತರೆ ಹೆಸರುಗಳಲ್ಲಿ ದೊಡ್ಡ ವ್ಯತ್ಯಾಸವನ್ನು ಗಮನಿಸುತ್ತೇವೆ.[14]

ಈ ವ್ಯತ್ಯಾಸಗಳ ಬಗ್ಗೆ ಅನೇಕ ಸಲಹೆಗಳಿವೆ. ಸರಳ - ಹಾಗೂ ಬಹು ಉತ್ತಮವಾದದ್ದು ಯಾವದೆಂದರೆ, *ಯೋಸೇಫನಿಂದ,*[15] ಯೇಸುವಿನ ನ್ಯಾಯ ಸಮ್ಮತರಾದ ವಂಶಾವಳಿಯನ್ನು ಮತ್ತಾಯನು ತಿಳಿಸಿರುವನು, ಲೂಕನು *ಮರಿಯಳಿಂದ*[16] ಉಂಟಾದ ದೈಹೀಕ ವಂಶಾವಳಿಯನ್ನು ತಿಳಿಸಿರುವನು. ಆ ವಿಶೇಷ ನಿರ್ಣಯವನ್ನು ಯೋಸೇಫಸನ ಕಾಲದಿಂದಲೂ ಗಮನಿಸು ತ್ತೇವೆ (c. ಕ್ರಿ.ಶ. 260-340).[17] ಯೋಸೇಫನ ದೃಷ್ಟಿಯಲ್ಲಿ ಆದ ಕ್ರಿಸ್ತನ ಜನನದ ಕುರಿತು ಮತ್ತಾಯನು ತಿಳಿಸಿರುವಾಗ (ಮತ್ತಾಯ 1:18-25; 2:13-15, 19-23), ಮರಿಯಳ ದೃಷ್ಟಿ ಕೋನದ ದೈಹೀಕ ವಂಶಾವಳಿಯನ್ನು ಲೂಕನು ತಿಳಿಸಿರುವನು (ಲೂಕ 1:26-56; 2:1-20; [ಗಮನಿಸಿ 2:9]). ಮತ್ತಾಯನು ಯೆಹೂದ್ಯರ ಹಾಗೂ ಲೂಕನು ಗ್ರೀಕರ ಪ್ರಾಧಾನ್ಯತೆಯನ್ನು ನೀಡಿರುವನು.[18]

ಲೂಕನು ಮರಿಯಳ ವಂಶಾವಳಿಯನ್ನು ತಿಳಿಸದೆ ಇರುವದು ಪ್ರಥಮ ಸಮಸ್ಯೆಯಾಗಿದೆ.[19] ಹಾಗೂ ಯೇಸು, ಯೋಸೇಫನ ನಿಜವಾದ ಮಗನಲ್ಲ ಎಂಬುದನ್ನು ಇಲ್ಲಿ ಗಮನಿಸೋಣ. (ಆದರೆ ಅವನ ಮಗನ ತರ), ಅಂದರೆ ಲೂಕನು ಯೋಸೇಫನ ವಂಶಾವಳಿಯನ್ನು ತಿಳಿಸದೆ ಇರುವ ಸೂಚನೆ ಇದಾಗಿದೆ. ಯೋಸೇಫನ ಹೊರತಾದರೆ, ಇನ್ಯಾರ ವಂಶಾವಳಿ? ಲೂಕನು ಮರಿಯಳ ವಂಶಾವಳಿಯನ್ನು ತಿಳಿಸುತ್ತಿದ್ದಾರೆ ಅದು ಸಂಬಂಧಿಸಿದ ಅಲೋಚನೆಯಾಗಿದೆ, "ಏಲಿಯ ಮಗನು" ಅಂದರೆ ಯೇಸುವೇ ಹೊರತು, ಯೋಸೇಫನಲ್ಲ.[20] A. T. ರಾಬರ್ಟ್‌ಸನ್‌ರವರ ಪ್ರಕಾರ, "ಯೇಸು ಏಲಿರ್ಯ ಮೊಮ್ಮಗನು."[21]

ಯೇಸು, ದಾವೀದನಿಂದ ನಿಜವಾದ ವಂಶಾವಳಿಯವನು ಎಂದು ಮತ್ತಾಯನು ತಿಳಿಸಿದ್ದರೆ, ಆತನು ದಾವೀದನಿಂದಾದ ದೈಹೀಕ ವಂಶಾವಳಿ ಎಂದು ಲೂಕನು ತಿಳಿಸಿರುವನು. ಮತ್ತಾಯನು ದಾವೀದನ ಮಗನಾದ ಸೋಲೋಮೋನನಿಂದ ವಂಶಾವಳಿ ತಿಳಿಸಿರುವನು. ಲೂಕನು ದಾವೀದನ ಮಗನಾದ ನಾತಾನನ ವಂಶಾವಳಿಯನ್ನು ತಿಳಿಸಿರುವನು (2 ಸಮುವೇಲ 5:14). ದಾವೀದನ ವಂಶಾವಳಿಯಲ್ಲಿ ಎರಡು ವಿಧ ಈ ಎರಡರಲ್ಲೂ ಇರುವ ಜೆರುಬಾಬೇಲನು ಒಬ್ಬನೇ ಆಗಿದ್ದರೇ, ವಂಶಾವಳಿಯು ಮಧ್ಯದಲ್ಲಿ ಒಂದಾಗಿ, ಅಂತ್ಯದಲ್ಲಿ ಪ್ರತ್ಯೇಕಗೊಳ್ಳುತ್ತದೆ.[22]

2 ಸಮುವೇಲ 7:16 ಪ್ರವಾದನೆಗಳು, ಈ ಎರಡು ವಂಶಾವಳಿಗಳನ್ನು ನೆರವೇರಿ ಸಿರುತ್ತದೆ.




*ದಾವೀದನಿಂದ ಉಂಟಾದ ಯೇಸುವಿನ ವಂಶಾವಳಿ*

## ಮಾಡಲ್ಪಟ್ಟ ವಾಗ್ದಾನಗಳು (ಲೂಕ 1:5-38)

ಕ್ರಿಸ್ತನು ಬಂದ ತಕ್ಷಣ ಉಂಟಾದ ಘಟನೆಗಳ ಪೂರ್ಣ ವಿವರಗಳನ್ನು ಲೂಕನು ದಾಖಲಿಸಿರುವನು. ವಾಗ್ದಾನಗಳ ಎರಡು ಕಥೆಗಳನ್ನು ಅವನು ತಿಳಿಸಿರುವನು.

**ಜಕರೀಯನಿಗೆ ಉಂಟಾದ ವಾಗ್ದಾನಗಳು (ವಚನಗಳು 5-25)**

ಯೆರೂಸಲೇಮಿನ ದೇವಾಲಯದಲ್ಲಿ ಯಾಜಕನಾದ ಜಕರೀಯನಿಗೆ ಉಂಟಾದ ವಾಗ್ದಾನ.

ಯೆರೂಸಲೇಮಿನ ದಕ್ಷಿಣ ಭಾಗದಲ್ಲಿ ಜಕರೀಯನು ನೆಲೆಸಿದ್ದನು. ಅವನ ಹೆಂಡತಿಯಾದ ಎಲಿಜಬೇತನು ಸಹ ಅರೋನನ ವಂಶದವಳಾಗಿದ್ದಳು.[23] ಅವರು ನೀತಿವಂತರು ಹಾಗೂ ದೇವ ಭಯವುಳ್ಳವರಾಗಿದ್ದರೂ ಆದರೆ ಅವರು ಮಕ್ಕಳನ್ನು ಹೊಂದದ ವೃದ್ಧರಾಗಿದ್ದರು (ವಚನ 7).

ಯಾಜಕರನ್ನು ಇಪ್ಪತ್ತನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಿದ್ದರು (1 ಪೂರ್ವಕಾಲವೃತ್ತಾಂತ 24:1-19). ಜಕರೀಯನು ಅಭೀಜನ ವಿಭಾಗದವನಾಗಿದ್ದನು (ಲೂಕ 1:5; ನೋಡಿರಿ 1 ಪೂರ್ವಕಾಲವೃತ್ತಾಂತ 24:10). ಅವರು ಸರತಿಯಲ್ಲಿ ದೇವಾಲಯದ ಸೇವೆ ಮಾಡುತ್ತಿದ್ದರು, ಅದು ಒಂದು ವಾರ ಕಾಲದ ಸೇವೆಯಾಗಿತ್ತು. ದೇವಾಲಯದ ಸೇವೆಯ ಕುರಿತು ಪ್ರತಿವಾರವು ಚೀಟು ಹಾಕುತ್ತಿದ್ದರು (ಲೂಕ 1:9). ಅತಿ ಪವಿತ್ರ ಸ್ಥಾನವನ್ನು ಪ್ರತ್ಯೇಕ ಮಾಡಿದ್ದ ತೆರೆಯ ಬಳಿಯಲ್ಲಿ ದೂಪಸುಡುವ ಕಷ್ಟಕರವಾದ ಸೇವೆಯು ಅದಾಗಿತ್ತು. ಇದು ಒಬ್ಬ ಯಾಜಕನು ಮಾಡಬಹುದಾದ ಅತಿಸಮೀಪದ ಸೇವೆಯಾಗಿತ್ತು. ಅದು ಜೀವಿತ ಕಾಲದಲ್ಲಿ ಒಮ್ಮೆ ದೊರಕುವ ಗೌರವಾನ್ವಿತ ಅವಕಾಶವಾಗಿತ್ತು.

ಈ ಕಥೆಯು ಆರಂಭಗೊಳ್ಳುವಾಗ - ದೇವಾಲಯದಲ್ಲಿನ ಸೇವೆಯ ಕಾರ್ಯವು ಜಕರೀಯನದಾಗಿತ್ತು - ಅವನು ಧೂಪ ಸುಡುವ ಅವಕಾಶವನ್ನು ಹೊಂದಿದ್ದನು. ಅವನು ಪರಿಶುದ್ಧ ಸ್ಥಳವನ್ನು ಪ್ರವೇಶಿಸುವಾಗ, ಅಹಾ ಇದು ಎಂಥಾ ವಿಶೇಷವಾದ ಅವಕಾಶ ಎಂದು ತಿಳಿದಿರಬಹುದು, ಅವನು ಬಯಸಿದ್ದಕ್ಕಿಂತಲೂ ಅತಿ ವಿಶೇಷವಾಗಿತ್ತು - ಯಾಕಂದರೆ ಗಬ್ರಿಯೇಲನೆಂಬ[24] ಒಬ್ಬ ದೇವ ದೂತನು ಅವನಿಗೆ ಪ್ರತ್ಯಕ್ಷವಾಗಿದ್ದನು.

ದೇವದೂತನು,[25] ಮುದುಕನಾದ ಜಕರೀಯ ಮತ್ತು ಅವನ ಹೆಂಡತಿಗೆ ಒಬ್ಬ ಗಂಡು

ಮಗನು ಜನಿಸುವನೆಂದು ತಿಳಿಸಿದ್ದನು (ವಚನ 13).[26] ಅವನಿಗೆ ಯೋಹಾನನೆಂದು ಹೆಸರಿಡಬೇಕು ಅವನು "ಎಲೀಯನ ಶಕ್ತಿ ಹಾಗೂ ಭಲವನ್ನು ಹೊಂದಿರುವನು." ಹಾಗೂ ಮೆಸ್ಸೀಯನ ಕುರಿತು ಮುಂದಾಗಿ ತಿಳಿಸುವವನು ಆಗಿದ್ದನು (ವಚನ 17[27]). ಆ ದೂತನ ಮಾತುಗಳನ್ನು ಯಾಜಕನು ವಿಶ್ವಾಸಿರಲಿಲ್ಲ (ವಚನಗಳು 18, 20). ಅಪನಂಬಿಕೆಯ ಗುರುತಾಗಿ, ಜಕರೀಯನು ಕೆಲಕಾಲ ಮೂಕನಾಗಬೇಗಬೇಕಾಯಿತು (ವಚನ 20).

ಅವನು ತನ್ನ ಒಂದು ವಾರಕಾಲದ ಸೇವೆಯನ್ನು ತೀರಿಸಿ, ತನ್ನ ಮನೆಗೆ ಹಿಂದಿರುಗಿದನು (ವಚನ 23). ದೇವ ದೂತರ ಮಾತಿನ ಮೇರೆಗೆ, ಅವನ ಹೆಂಡತಿಯು ಗರ್ಭಧರಿಸಿದಳು (ವಚನ 24). ನಮ್ಮ ಹಾಗೆ, ಆ ಯಾಜಕನು ಸಹ "ದೇವರಿಗೆ ಅಸಾಧ್ಯವಾದದ್ದು ಯಾವದು ಇಲ್ಲ ಎಂಬ ಪಾಠವನ್ನು ಕಲಿಯಬೇಕಾಯಿತು" (ವಚನ 37; KJV).

**ಮರಿಯಳಿಗೆ ಉಂಟಾದ ವಾಗ್ದಾನ (ವಚನಗಳು 26-38)**

ಮೊದಲನೆಯ ವಾಗ್ದಾನವನ್ನು ಪರಿಶುದ್ಧ ಸ್ಥಳವಾದ ಪಾಲೆಸ್ತೇನಿನಲ್ಲಿ ಮಾಡಿದ್ದರೆ, ಎರಡನೆಯದನ್ನು ಬಹಳ ಕಡೆಗಣಿಸಿದ ಸ್ಥಳದಲ್ಲಿ ಮಾಡಲಾಯಿತು (ಯೋಹಾನ 1:46).

ಎಲಿಜಬೇತಳು ಆರು ತಿಂಗಳ ಗರ್ಭವತಿಯಾಗಿರುವಾಗ (ವಚನಗಳು 26, 36),[28] ಗಲಿಲಾಯದ ಅತಿ ಚಿಕ್ಕ ಹಳ್ಳಿಯಾದ ನಜರೇತಿನಲ್ಲಿ ಒಬ್ಬ ಯೌವನಸ್ಥೆಗೆ ದೇವದೂತನು ಪ್ರತ್ಯಕ್ಷವಾಗಿದ್ದು.[29] ಆಕೆಯು ಯೋಸೇಫನಿಗೆ ... ನಿಶ್ಚಿತಾರ್ಥವಾಗಿದ್ದ ಕನ್ಯೆಯಾಗಿದ್ದಳು ಆಕೆಯ ಹೆಸರು ಕನ್ಯಾಮರಿಯಳು (ವಚನ 27).

ನಿಶ್ಚಿತಾರ್ಥ ಎಂದರೆ ನಮಗೆ ಪರಿಚಯವಿರುವ ಅರ್ಥವಾಗಿರದೆ ಗ್ರೀಕ್ ಅನುವಾದದಲ್ಲಿ "ಒಂದಾಗುವ ಕ್ರಮ" ಎಂದಿರುತ್ತದೆ. ಯೆಹೂದ್ಯರ ಮದುವೆಗಳಲ್ಲಿ ಎರಡು ಕ್ರಮಗಳಿದ್ದವು: ಅವರು ಕೊಡುವದಕ್ಕೆ ಮುಂಚಿನ ಸಮಯ (ಮತಾಯ 1:18) ನಂತದಲ್ಲಿ ಮದುವೆಯ ಕಾರ್ಯದ ಸಮಯ,[30] ಅವರು ಜಾಪಜಾಲಿಕವಾಗಿ ಮದುವೆಯಾಗದಿದ್ದರೂ ಮರಿಯಳು ಮತ್ತು ಯೋಸೇಫರು ಒಬ್ಬರಿಗೊಬ್ಬರು ಸೇರಿದವರಾಗಿದ್ದರು.[31]

ದೇವದೂತನು ಮರಿಯಳಿಗೆ, "ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ ಆತನಿಗೆ ಯೇಸುವೆಂದು ಹೆಸರಿಡಬೇಕು" ಎಂದನು (ವಚನ 31). ಇಬ್ರಿಯ ಭಾಷೆಯ "ಯೆಹೋಶುವ" ಎಂಬ ಹೆಸರೇ "ಯೇಸು" ಎಂಬ ನಾಮವಾಗಿದೆ, ಅಂದರೆ "ಯೆಹೋವನು ರಕ್ಷಿಸುವನು" ಅಥವಾ "ಯೆಹೋವನು ರಕ್ಷಣೆ" ಎಂಬುದಾಗಿದೆ. ಇದು ಆ ದಿನಗಳ ಸಹಜ ಹೆಸರಾಗಿತ್ತು.[32] ಅದ್ದರಿಂದ ಮರಿಯಳ ಮಗನಿಗೆ ನೀಡಿದ ಈ ಹೆಸರು ಯೋಗ್ಯವಾಗಿತ್ತು (ನೋಡಿರಿ ಮತ್ತಾಯ 1:21).

ಜಕರೀಯನಂತೆ, ಮರಿಯಳು ಸಂದೇಶ ಪಡದೆ, ದೂತರು ತನಗೆ ಮಾಡಿದ ವಾಗ್ದಾನವನ್ನು ನಂಬಿದಳು (ಲೂಕ 1:45) ಆದರೆ ಅದು ಜರುಗುವ ವಿಧಾನದ ಕುರಿತು ಪ್ರಶ್ನಿಸಿದಳು:

> ಮರಿಯಳು ಆ ದೂತನನ್ನು - ಇದು ಹೇಗಾದೀತು?[33] ನಾನು ಪುರುಷನನ್ನು ಅರಿತವಳಲ್ಲವಲ್ಲಾ ಎಂದು ಕೇಳಿದ್ದಕ್ಕೆ ದೂತನು - ನಿನ್ನ ಮೇಲೆ ಪವಿತ್ರಾತ್ಮ ಬರುವದು; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು; ಆದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು (ವಚನಗಳು 34, 35).

ಸತ್ಯವೇದದ ಪ್ರಕಾರ ಕನ್ಯಾ ಜನನವನ್ನು ಹೊಂದಾಣಿಕೆ ಮಾಡಿಕೊಳ್ಳಲು ಅಸಾಧ್ಯವೆನಿಸಿದರೂ, ಅದನ್ನು ನಂಬಿಕೆಯಿಂದ ಸ್ವೀಕರಿಸಬೇಕಷ್ಟೆ. ಇದನ್ನು ನಂಬುವದು ಪ್ರಮುಖವಲ್ಲ ಎಂಬುದು ಕೆಲವರ ಬೋಧನೆ. ಇದರ ಸಿದ್ಧಾಂತವು ನಂಬಿಕೆಗೆ ಅರ್ಹವಾದದ್ದು ಎಂಬುದರಲ್ಲಿ ಕೆಲವು ವಿಚಾರಗಳನ್ನು ಫ್ರಾಂಕ್‌ಲಿನ್ ಕಾರ್ಟರ್‌ವರು ವಿವರಿಸಿದ್ದಾರೆ:[34]

(1) ಕನ್ಯಾ ಜನನದ ಕುರಿತು ಹೊಸ ಒಡಂಬಡಿಕೆಯ ತಿಳಿಸಿರುವದರಿಂದ ಕನ್ಯಾ ಜನನವನ್ನು ಅಲ್ಲಗಳೆಯುವದು. ಪ್ರೇರಿತವಾದ ಗ್ರಂಥಗಳನ್ನು ಅಲ್ಲಗಳೆದಂತೆ.

(2) ಕನ್ಯಾ ಜನನವು "ದೇವರು ತಾನೇ ಮಾಂಸದಾರಿಯಾದನು" ಎಂಬ ಅಂಶವನ್ನು ಹೊಂದಿರುವದರಿಂದ, ಅದನ್ನು ಅಲ್ಲಗಳೆಯುವದು, ಯೇಸುವಿನ ದೈವಾಂಶವನ್ನೇ ಅಲ್ಲಗಳೆದಂತೆ.

(3) ಕನ್ಯಾ ಜನನವು, ಯೇಸುವೇ ದೇವರೆಂದು ನಿರೂಪಿಸುವದರಿಂದ, ಅದನ್ನು ಅಲ್ಲಗಳೆ ಯುವು, ಯೇಸುವಿನ ಮರಣವನ್ನು ಅಲ್ಲಗಳೆದಂತೆ.

(4) ಕನ್ಯಾ ಜನನವು, ಯೇಸುವಿನ ಜೀವಿತದಲ್ಲಿನ ಪ್ರಥಮ ಅದ್ಭುತವಾಗಿದ್ದರಿಂದ ಅದರ ನಿರಾಕರಣೆ, ಆತನ ಅದ್ಭುತಗಳನ್ನೇ ನಿರಾಕರಿಸಿದಂತೆ, ಅದರಲ್ಲಿ ಯೇಸುವಿನ ಪುನರುತ್ಥಾನವು ಸಹ ಒಳಗೊಂಡಿದೆ. ಅಪನಂಬಿಕೆಯು ಕನ್ಯಾ ಗರ್ಭದ ಸತ್ಯವನ್ನು ನಿರಾಕರಣೆ ಮಾಡುವ ಬೇರು ಹಾಗು ಫಲವಾಗಿದೆ.

## ಕೃತಜ್ಞತೆ (ಲೂಕ 1:39-56)[35]

ಮರಿಯಳ ಸಂಬಂಧಿಯಾದ ಎಲಿಜಬೇತಳನ್ನು ಗಬ್ರಿಯೇಲನು ಸಂಧಿಸಿದನು, ಆಕೆಯು ಗರ್ಭವತಿಯಾಗಿದ್ದಳು. ಜಕರೀಯ ಮತ್ತು ಎಲಿಜಬೇತಳು ವಾಸವಾಗಿದ್ದ ದಕ್ಷಿಣದ ಪ್ರದೇಶಕ್ಕೆ ಮರಿಯಳು ಎಪ್ಪತ್ತರಿಂದ, ಎಂಬತ್ತು ಮೈಲುಗಳಷ್ಟು ಪ್ರಯಾಣ ಮಾಡಿದಳು (ವಚನಗಳು 39, 40). ತನಗಾಗಿದ್ದ ಸಂಗತಿಯನ್ನು ಬಹುಶಃ ತನ್ನ ಸ್ನೇಹಿತೆಯಾದ ಎಲಿಜಬೇತಳು ಅರ್ಥಮಾಡಿಕೊಳ್ಳುವಳು ಎಂದು ಮರಿಯಳು ತಿಳಿದಿದ್ದಳು.

### ಎಲಿಜಬೇತಳು ಮರಿಯಳನ್ನು ಗೌರವಿಸಿದಳು (ವಚನಗಳು 41-45)

ಅದು ಒಂದು ವಿಶೇಷವಾದ ಸೇರುವಿಕೆಯಾಗಿತ್ತು - ಒಬ್ಬ ವೃದ್ಧೆ ಇನ್ನೊಬ್ಬಳು ಯೌವನಸ್ಥೆ, ಈ ಇಬ್ಬರನ್ನು ದೇವರ ಕೈಗಳು ಸ್ಪರ್ಷಿಸಿದ್ದವು. ಎಲಜಬೇತಳು ಮರಿಯಳನ್ನು ಸಂಧಿಸಿದ ತಕ್ಷಣ, ಆಕೆಯು ಮರಿಯಳನ್ನು ಬಹಳವಾಗಿ ಗೌರವಿಸಿದಳು: ಆಕೆ ಮಹಾ ಸ್ವರದಿಂದ ಕೂಗಿ: "ನೀನು ಸ್ತ್ರೀಯರೊಳಗೆ ಆಶೀರ್ವಾದ ಹೊಂದಿದವಳು ಮತ್ತು ನಿನ್ನಲ್ಲಿ ಹುಟ್ಟುವ ಕೂಸು ಆಶೀರ್ವಾದ ಹೊಂದಿದ್ದು" ಎಂದಳು! (ವಚನ 42).

### ಮರಿಯಳು ದೇವರನ್ನು ಕೊಂಡಾಡಿದಳು (ವಚನಗಳು 46-56)

ಮರಿಯಳು ದೇವರನ್ನು ಸ್ತುತಿಸಿದಳು. ದೇವರು ಮಾಡಿದಂಥ ಹಾಗೂ ಮಾಡಲಿರುವಂಥ ಕಾರ್ಯಗಳನ್ನು ಕೊಂಡಾಡಿದಳು.[36]

ಮರಿಯಳು ಯುದಾಯದಲ್ಲಿ ಮೂರು ತಿಂಗಳ ಕಾಲ ತಂಗಿದ್ದಳು - ಅಂದರೆ ಎಲಿಜಬೇತಳ ಗರ್ಭಾವಸ್ಥೆಯ ಅಂತ್ಯದವರೆಗೆ, ನಂತರ ಅವಳು ನಜರೇತಿಗೆ ಹಿಂದಿರುಗಿದಳು.[37]

## ಒಬ್ಬ ಪ್ರವಾದಿಯ ಒದಗಿಸುವಿಕೆ (ಲೂಕ 1:57-80)

### ಯೋಹಾನನ ಜನನ (ವಚನಗಳು 57-79)

ಜಕರೀಯ ಹಾಗೂ ಎಲೀಜಬೇತಳಿಗೆ ಕೂಸು ಜನಿಸಿದಾಗ, ನೆರೆಹೊರೆಯವರು ಅವರೊಂದಿಗೆ ಆನಂದಿಸಿದರು.

ಯೆಹೂದ್ಯರ ಪ್ರಕಾರ, ಹುಟ್ಟಿದ ಗಂಡು ಮಗುವಿಗೆ ಎಂಟನೆಯ ದಿನದಲ್ಲಿ ಸುನ್ನತಿ ಮಾಡಿಸಬೇಕಿತ್ತು (ಯಾಜಕಕಾಂಡ 12:3). ಸುನ್ನತಿಯ ಸಮಯದಲ್ಲಿ ಆ ಕೋಣ ಸಂಬಂಧಿಕರು[38] ಅವನಿಗೆ "ಜಕರೀಯನೆಂದು ಹೆಸರಿಡಬೇಕೆಂದು ಚಿಂತನೆ ನಡೆಸುವಾಗ,

ಆದರೆ ಎಲಿಜಬೇತಳು" (ತನಗೆ ತಿಳಿಸಲ್ಪಟ್ಟ ಪ್ರಕಾರ) ಅವನಿಗೆ "ಯೋಹಾನನೆಂದು ಹೆಸರಿಡಬೇಕೆಂದಳು" (ವಚನ 60). ಇದರ ವಿಚಾರವಾಗಿ ಅವರು ಜಕರೀಯನನ್ನು ವಿಚಾರಿಸಲಾಗಿ, ಅವನು ಎಲಿಜಬೇತಳು ತಿಳಿಸಿದ ಹೆಸರನ್ನೇ ಇಡಬೇಕೆಂದನು. "ಕೂಡಲೇ ಅವನಿಗೆ ಬಾಯಿ ಬಂತು ನಾಲಿಗೆ ಸಡಿಲವಾಯಿತು, ಅವನು ಮಾತಾಡುವ ಶಕ್ತಿವುಳ್ಳವನಾಗಿ ದೇವರನ್ನು ಕೊಂಡಾಡಿದನು" (ವಚನ 64).

ವಚನ 68ರಿಂದ 79ರವರೆಗೆ, ಹಳೆಯ ಪ್ರವಾದಿಯ ಪ್ರೇರಿತ ಮಾತುಗಳಿವೆ. ವಚನ 68 ಮತ್ತು 75ರವರೆಗೆ, ದೇವರು ತನ್ನ ಜನರಿಗೆ ಮಾಡಿದ ವಾಗ್ದಾನಗಳಿಗಾಗಿ ಸ್ತುತಿಯನ್ನು ನೀಡಲಾಗಿದೆ, ವಚನ 76ರಿಂದ 79ರಲ್ಲಿ ಆ ಮಗನಿಗಾಗಿ ಮಾರ್ಗದರ್ಶನವಿದೆ. ಆತನು, ಚಿಕ್ಕವನಾದ ಯೋಹಾನನಿಗೆ, "ಮಗವೇ ನೀನಾದರೋ ಪರಾತ್ಪರನ ಪ್ರವಾದಿ, ಯೆನಿಸಿಕೊಳ್ಳುವಿ; ನೀನು ಕರ್ತನ ಮುಂದೆ ಹೋಗಿ ಆತನ ಹಾದಿಗಳನ್ನು ಸಿದ್ಧಮಾಡುವಿ; ನೀನು ಕರ್ತನ ಮುಂದೆ ಹೋಗಿ ಆತನ ಹಾದಿಗಳನ್ನು ಸಿದ್ಧಮಾಡುವಿ" ಎಂದಿದೆ (ವಚನ 76). ದೇವದೂತನು ತಿಳಿಸಿದ ಹಾಗೆ, ಮಲಾಕಿ ಗ್ರಂಥದ ವಾಕ್ಯದ ಆಧಾರದಿಂದ, ಮೆಸ್ಸಿಯನ ಹಾದಿಯನ್ನು ಸಿದ್ಧ ಮಾಡುವವನು ಎಂದು ಜಕರೀಯನು ತಿಳಿಸಿದನು.

**ಯೋಹಾನನ ಜೀವಿತದ ಆರಂಭ (ವಚನ 80)**

ವಚನ 80ರಲ್ಲಿ, ಯೋಹಾನನ ಮೊದಲ ಮೂವತ್ತು ವರ್ಷಗಳ ದಾಖಲೆಗಳನ್ನು ನೀಡಲಾಗಿದೆ: "ಆ ಬಾಲಕನು ಬೆಳೆದು ಆತ್ಮದಲ್ಲಿ ಬಲವುಳ್ಳವನಾದನು. ಮತ್ತು ಇಸ್ರಾಯೇಲ್ ಜನರಿಗೆ ತನ್ನನ್ನು ತೋರ್ಪಡಿಸಿಕೊಳ್ಳುವ ದಿನದವರೆಗೆ ಅರಣ್ಯ ಪ್ರದೇಶಗಳಲ್ಲಿ ಇದ್ದನು." ಅ ಅರಣ್ಯವು ಯುದಾಯ ಪ್ರದೇಶದ, ಲವಣ ಸಮುದ್ರದ ಬಳಿಯಲ್ಲಿತ್ತು.

## ಮುಕ್ತಾಯ

ದೇವದೂತರು ಮಾನವರಿಗೆ ಪ್ರತ್ಯಕ್ಷವಾಗಿದ್ದರು. ದೇವ ಜನರು ಪ್ರೇರಿತರಾಗಿ ಮಾತನಾಡಿದ್ದರು.[39] ಮೌನದ ನಾಲ್ಕುನೂರು ವರ್ಷಗಳಿಗೆ ಅಂತ್ಯವಾಗಿತ್ತು. "ಕಾಲವು ಪರಿಪೂರ್ಣವಾದಾಗ" (ಗಲಾತ್ಯ 4:4), ಕ್ರಿಸ್ತನು ಬರುವದಕ್ಕಿದ್ದನು!

ಮೆಸ್ಸೀಯನ ಬರೋಣದ ಭರವಸೆಯಲ್ಲಿದ್ದವರ ಸಂತೋಷ ಅಪಾರವಾಗಿತ್ತು. ಯೇಸುವಿನ ಬರೋಣದಲ್ಲಿ ಆನಂದಿಸಿದರು, "ಆತನು ಬರುತ್ತಾನೆ ಹಾಗೂ ಜೀವಿ ಸುತ್ತಿದ್ದಾನೆ ಎಂಬ ಮಾತಿನಿಂದ ನಿಮಗೆ ಆನಂದವಾಗುತ್ತದೆಯೋ"? ಈ ವಿಷಯವನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ.

ಮುಂದಿನ ಪಾಠದಲ್ಲಿ, ಯೇಸುವಿನ ಜನನದ ಕುರಿತು ಅಭ್ಯಾಸ ಮಾಡೋಣ.

---

ಟಿಪ್ಪಣಿಗಳು

[1]ಯೋಹಾನನ ಜನನ (ಮತ್ತಾಯ 1:18-25) ಹಾಗೂ ಮರಿಯಳ ಸಂಧಿಸುವಿಕೆಯ ನಡುವೆ ಸೇರಿಸ ಬಹುದಾಗಿದೆ ಲೂಕ 1ರಲ್ಲಿ ಕೊಟ್ಟಿರುವ ಚರಿತ್ರೆಯ ಪ್ರಕಾರ ಹೋಗುವಾಗ ಸ್ವಲ್ಪ ಅನುಕೂಲತೆಗಳಿವೆ. ಸಮಾಂತರದ ಭಾಗದಲ್ಲಿ ಮತ್ತಾಯ 1:18ರಿಂದ ಪ್ರಾರಂಭಿಸೋಣ. [2]ಲೂಕನ ಸುವಾರ್ತೆಯ ಪಾಠದಲ್ಲಿ ಲೂಕ 1:1-4ರ ಮೇಲೆ ಮುಂಚಿತವಾಗಿ ಕೊಟ್ಟಿರುವ ವ್ಯಾಖ್ಯಾನವನ್ನು ಸಂಕ್ಷಿಪ್ತವಾಗಿ ಕಾಣಬಹುದು. [3]ಒಂದು ವಿಶಿಷ್ಟವಾದ ಪರಿಚಯಕ್ಕೆ ಯೋಹಾನನ ಕಾರಣವನ್ನು ಯೋಹಾನನ ಪುಸ್ತಕದಲ್ಲಿರುವ ಒಂದು ಪಾಠದಲ್ಲಿ ಹಿಂದಿನ ಪುಸ್ತಕದಲ್ಲಿ ಚರ್ಚಿಸಲಾಗಿದೆ. [4]ಯೇಸು ಸೃಷ್ಟಿಕರ್ತೃ ಯೋಹಾನ 1:10; 1 ಕೊರಿಂಥ 8:6; ಕೊಲಸ್ಸೆ 1:16, 17; ಇಬ್ರಿಯ 1:2 ನೋಡಿ. [5]ಕೆಲವರು ಯೇಸುವನ್ನು "ಯೆಹೋವನ ದೂತರ" ಸಂಗಡ ಹೋಲಿಸುತ್ತಾರೆ (ಆದಿಕಾಂಡ 16:7). ಇದು ಅದೇ ದೇವ ದೂತನೋ ಅಲ್ಲವೋ ಎಂಬುದು ಸ್ಪಷ್ಟವಾಗಿಲ್ಲ. ಅದೇ ಆಗಿದ್ದರೂ, "ದೈವತ್ವದಲ್ಲಿರುವ"

ಎರಡನೇ ಆತನು ಎಂಬುದಕ್ಕೆ ಪುರಾವೆಗಳಿಲ್ಲ. [6]ಯೋಹಾನ 1:1, 14ರಲ್ಲಿರುವ *logos*ನ್ನು ವಾಕ್ಯವೆಂದು ಭಾಷಾಂತರಿಸಲಾಗಿದೆ. ಲ್ಯಾಜಿಕ್ ಎಂಬ ಮಾತು ಅದರಿಂದ ಬಂದಿದೆ. ಬಾಯಾಲಜೀ ಎಂಬ ಮಾತಿನಲ್ಲಿ ಸಹ ಈ ಪದದ ಬಳಕೆಯನ್ನು ಕಾಣಬಹುದು. ಕರ್ತನಾದ ಯೇಸುವನ್ನು ಸೂಚಿಸಲು ಅಪೊಸ್ತಲನಾದ ಯೋಹಾನನು ಮತ್ತಿತರ ವಚನಗಳಲ್ಲಿ ಸಹಿತ ಈ ಪದವನ್ನು ಉಪಯೋಗಿಸಿದನು (1 ಯೋಹಾನ 1:1; ಪ್ರಕಟನೆ 1:2; 19:13ರನ್ನು ನೋಡಿ). ಕ್ರಿಸ್ತನನ್ನು ಸೂಚಿಸಲು ಈತನೊಬ್ಬನು ಮಾತ್ರವೇ ಹೊಸ ಒಡಂಬಡಿಕೆಯಲ್ಲಿ ಈ ಪದವನ್ನು ಬಳಸಿದನು. [7]"ದೇಹಕ್ಕೆ ಸಂಬಂಧಿಸಿದ" ಎಂಬ ಪದವನ್ನು "ಶಾರೀರಿಕ" ಸಂಬಂಧಿಯೆಂದು KJV ಯಲ್ಲಿ ಭಾಷಾಂತರಿಸಲಾಗಿದೆ (ರೋಮಾಪುರ 7:14). [8]ಯೋಹಾನ 3:19-21 ಇದನ್ನು ಸಹ ನೋಡಿರಿ. [9]ಯೋಹಾನ 3ರಲ್ಲಿ ಆತ್ಮೀಕ ಜನನದ ಬಗ್ಗೆ ಮುಂದುವರೆಸಲಾಗಿದೆ. [10]Ken Gire, *Moments with the Savior* (Grand Rapids, Mich.: Zondervan Publishing House, 1998), 18.

[11]ಮತ್ತಾಯನ ವಂಶಾವಳಿ ಪಟ್ಟಿಯನ್ನು ಹಳೆ ಒಡಂಬಡಿಕೆಯ ಪಟ್ಟಿಯ ಜೊತೆ ಹೋಲಿಸಿ ನೋಡಿದರೆ ಕೆಲವು ಹೆಸರುಗಳು ಬಿಡಲ್ಪಟ್ಟಿವೆ ಉದಾಹರಣೆ ಮತ್ತಾಯ 1:8ರಲ್ಲಿ "ಯೆಹೋರಾಮನು ಉಜ್ಜೀಯನನ್ನು ಪಡೆದನು" ಎಂದಿದೆ. ಆದರೆ ವಾಸ್ತವಿಕವಾಗಿ ಉಜ್ಜೀಯ ಯೋಹೋರಾಮನಿಗೆ ಮರಿ ಮಗ (2 ಅರಸು 8:25; 13:1; 14:1, 21ರನ್ನು ನೋಡಿ). ಪ್ರತ್ಯೇಕವಾದ ಇವರನ್ನು ಏನನಕ್ಕಾಗಿ ಪ್ರಸ್ತಾಪಿಸಲ್ಲವೋ ತಿಳಿಯದು. ಅವರು ದುಷ್ಟರೇ, ಆದರೂ ಪ್ರಸ್ತಾಪಿಸಲ್ಪಟ್ಟ ಅರಸರು ಸಹ ಅಂಥವರೇ ಎರಡು ವಾಸ್ತವ ವಿಷಯಗಳನ್ನು ಗಮನಿಸಿ: (1) ವಂಶವಳಿಯನ್ನು ತೋರಿಸುವುಕ್ಕಾಗಿ ಹೆಸರುಗಳು ಪ್ರಸ್ತಾಪಿಸಲ್ಪಡಲಾಗಿತ್ತು, ಆದರೆ ವಂಶಾವಳಿಯಲ್ಲಿರುವ ಒಬ್ಬೊಬ್ಬರ ಹೆಸರನ್ನು ಹೇಳುವುದು ಮುಖ್ಯವಲ್ಲ. (2) "ಸುಂದರವಾದ" ಪಟ್ಟಿಯನ್ನು ಯೂದರು ಇಷ್ಟಪಡುವರು. [12]F. LaGard Smith, *The Narrated Bible in Chronological Order* (Eugene, Oreg.: Harvest House Publishers, 1984), 1353. [13]Gire, 19. [14]ಅದು ಯೆರುಬ್ಯಾಬೇಲ್ ಇರಬಹುದು (ಮತ್ತಾಯ 1:12; ಲೂಕ 3:27). ಎರಡು ಪಟ್ಟಿಯಲ್ಲಿರುವ ಯೆರುಬ್ಯಾಬೇಲನು ಒಬ್ಬನೇ ಎಂದು ಹಲವರು ನಂಬುವದಿಲ್ಲ. [15]ಯೇಸು ಯೋಸೇಫನ ನ್ಯಾಯಸಮ್ಮತವಾದ ಮಗನೇ ಹೊರತು ದೈಹೀಕ ಮಗನಲ್ಲ. ದೇವರೇ ಯೇಸುವಿನ ಒಬ್ಬನೇ ತಂದೆಯಾಗಿದ್ದನು. [16]ಅರಸನ ಹಾಗೂ ನ್ಯಾಯ ಸಮ್ಮತವಾದ ವಿಧದಿಂದ ಆತನ ವಂಶವನ್ನು ನಿರ್ಧರಿಸಬಹುದು. [17]*Ecclesiastical History* 1.7. [18]ಮತ್ತಾಯ ಹಾಗೂ ಲೂಕನ ಪುಸ್ತಕಗಳಲ್ಲಿ ಹಿಂದಿನ ಚರ್ಚೆಯನ್ನು ಗಮನಿಸಿ. [19]ಯೂದರ ವಂಶಾವಳಿಯಲ್ಲಿ ಸ್ತ್ರೀಯರನ್ನು ಸೇರಿಸಲಿರಲಿಲ್ಲ, ಆದರೆ ಪುರುಷರಿಂದಲೇ ವಂಶಾವಳಿಯನ್ನು ಗಮನಿಸುತ್ತಿದ್ದರು (ಮತ್ತಾಯ 1:3, 5), ಆದರೆ ವಂಶಾವಳಿ ಕ್ರಮವನ್ನು ನೋಡಲು ಪುರುಷರಿಂದಲೇ ನೋಡುವರು. [20]ಹಲವು ಭಾಷಾಂತರಗಳಲ್ಲಿ "ಏಲೀ" ಎಂದಿದೆ. ಮತ್ತು ಹಲವುಗಳಲ್ಲಿ "ಹೇಲಿ" ಎಂದಿದೆ.

[21]A. T. Robertson, *A Harmony of the Gospels for Students of the Life of Christ* (New York: Harper & Row, 1950), 261. "ಕುಮಾರನು" ಎಂಬ ಪದ ಸಂತತಿಯವನಾಗಿರಬಹುದು ಎಂದು ಸೂಚಿಸುತ್ತದೆ (ಮತ್ತಾಯ 1:1 ನೋಡಿ). ಬೈಬಲಿನಲ್ಲಿ ಮತ್ತೊಂದು ಅರ್ಥವನ್ನು ಕೊಡುವ ಈ ಪದ ಪ್ರಯೋಗವು "ಅಳಿಯನನ್ನು" "ಕುಮಾರನನ್ನಾಗಿ" ಸ್ವೀಕರಿಸುವುದುಂಟು. ಏಲೀ ಹೆಣ್ಣು ಮಕ್ಕಳನ್ನು ಪಡೆದಿದ್ದನು, ಅಳಿಯನು ಕುಮಾರನಾಗಿ ಸ್ವಾಸ್ತ್ಯವನ್ನು ಹೊಂದಿಕೊಳ್ಳಬಹುದು (ನೋಡಿ ಅರಣ್ಯಕಾಂಡ 27:1-11; 36:1-13). [22]14ನೇ ಸೂಚನೆಯಲ್ಲಿ ತಿಳಿಸಿದ ಹಾಗೆ ಪಟ್ಟಿಯಲ್ಲಿ ಸೂಚಿಸಿರುವ ಯೆರುಬೇಬಲನು ಒಬ್ಬನೇ ಆಗಿರಲಾರನು ಅಥವ ಆಗಿರಬಹುದು. [23]ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಒಬ್ಬ ಯಾಜಕನಾಗಬೇಕಾದರೆ ಮಹಾ ಯಾಜಕನಾದ ಅರೋಹನನ ಕುಲದವನಾಗಿರಬೇಕು (ವಿಮೋಚನಕಾಂಡ 28:1). [24]ಬೈಬಲಿನಲ್ಲಿ ಇಬ್ಬರ ದೂತರನ್ನು ಹೆಸರಿಟ್ಟು ಕರೆಯಲಾಗಿದೆ: ಗಬ್ರಿಯೇಲ್ (ಲೂಕ 1:19, 26; ನೋಡಿ ದಾನಿಯೇಲ 8:16; 9:12) ಮತ್ತು ಮಿಕಾಯೇಲ (ಯೂದ 9; ಪ್ರಕಟನೆ 12:7; ನೋಡಿ ದಾನಿಯೇಲ 10:13, 21; 12:1). [25]"ದೂತ" ಅಂದರೆ "ಸಂದೇಶಕ" ಎಂದು ಅರ್ಥ. [26]ಯೋಹಾನನು ಪಾನ ಮಾಡುವದಿಲ್ಲವೆಂದು ದೂತನು ಪ್ರಕಟಿಸಿದನು (ಲೂಕ 1:15). ಇದನ್ನು ಅರಣ್ಯಕಾಂಡ 6:2, 3ಕ್ಕೆ ಹೋಲಿಸಿ. ಬಹುಶ ಯೋಹಾನನು ಜನ್ಮಿಸಿದ ದಿನದಿಂದ ಪ್ರತಿಷ್ಠಲ್ಪಟ್ಟನು. ಪ್ರತಿಷ್ಠಲ್ಪಟ್ಟವರಲ್ಲಿ ಸಂಸೋನನು (ನ್ಯಾಯಾಸ್ಥಾಪಕರು 13:3-7) ಮತ್ತು ಸಮುವೇಲನು (1 ಸಮುವೇಲ 1:11). [27]ಗಬ್ರಿಯೇಲನು ಪ್ರವಾದನೆಯನ್ನು ಮಲಾಕಿಯ 4:5, 6ರಿಂದ ಉಲ್ಲೇಖಿಸಲಾಗಿದೆ. [28]ಗಬ್ರಿಯೇಲನ ಪ್ರಕಟನೆಯ ನಂತರ ಮರಿಯಳು ಗರ್ಭವತಿಯಾದಳೆಂದು ಊಹಿಸಿದರೆ, ಯೋಹಾನನು ಕರ್ತನಿಂತ ಆರು ತಿಂಗಳು ದೊಡ್ಡವನು. [29]ಮೊದಲನೆಯ ಶತಮಾನದ ಯೂದಯ ಚರಿತ್ರೆ ಕರ್ತನಾದ ಜೋಸಿಫಸನು ಗಲಿಲಾಯದಲ್ಲಿರುವ 204 ನಗರಗಳನ್ನು ಮತ್ತು ಪಟ್ಟಣಗಳನ್ನು ಸೂಚಿಸಿದ್ದಾನೆ ಆದರೆ ನಜರೇತಿನ ಬಗ್ಗೆ ಹೇಳಲಿಲ್ಲ. (J. W. McGarvey and Philip Y. Pendleton,

*The Fourfold Gospel or A Harmony of the Four Gospels* [Cincinnati: Standard Publishing Co., 1914], 14.) Talmud ನಲ್ಲಿ ಅರವತ್ತು ಮೂರು ಗಲಿಲಾಯದ ಪಟ್ಟಣಗಳನ್ನು ಪಟ್ಟಿಮಾಡಲಾಗಿದೆ ಆದರೆ ನಜರೇತನ್ನು ಹೇಳಲಿಲ್ಲ. [30]ನಿಶ್ಚಯವಾಗಿ ಒಂದು ವರ್ಷದ ನಂತರ ಮದುವೆ ನಡೆಯುತ್ತಿತ್ತು.

[31]ಧರ್ಮೋಪದೇಶಕಾಂಡ 22:23, 24ನ್ನು ಓದಿ. ಮರಿಯಳು ಗರ್ಭಿಣಿಯಾಗಿದ್ದಾಳೆಂದು ತಿಳಿದುಕೊಂಡಾಗ ಯೋಸೇಫನಿಗೆ ಉಂಟಾದ ಸಂಶಯದ ಬಗ್ಗೆ ವಿವರಿಸುತ್ತದೆ (ಮತ್ತಾಯ 1:18, 19). [32]ಅಪೊಸ್ತಲರ ಕೃತ್ಯಗಳು 13:6ನ್ನು ಓದಿ. (ಬರೆ ಯೇಸು ಎಂದರೆ "ಯೇಸುವಿನ ಕುಮಾರನೆಂದು" ಅರ್ಥ.) "ಯೇಸು" ಎಂಬದು ಸಾಮಾನ್ಯ ಹೆಸರು. (ಒಂದು ಸಮಯದಲ್ಲಿ ನನ್ನ ಪಕ್ಕದ ಮನೆಯವರಿಗೆ ಯೇಸು ಎಂಬ ಹೆಸರುಳ್ಳ ಒಬ್ಬ ಆತನಿದ್ದನು.) [33]ಲೂಕ 1:27ರಲ್ಲಿ ಗ್ರೀಕ್ ಮೂಲದ "ಕನ್ಯೆ" (*parthenos*) ಎಂಬ ಹೆಸರನ್ನು ಬಳಸಲಾಗೆದೆ. ವಚನ 34ರಲ್ಲಿ ಮರಿಯಳು ಹೀಗೆ ಹೇಳಿದಳು, "ಪುರುಷನನ್ನು ಅರಿತವಳಲ್ಲ" (KJV ಯನ್ನು ನೋಡಿ). ದೂತಳು ಮರಿಯಳಿಗೆ ಕಾಣಿಸಿಕೊಂಡಾಗ ಮರಿಯಳು ಕನ್ಯೆಯಾಗಿಯೆ ಇದ್ದಳು ಎಂಬುದನ್ನು ವಾಕ್ಯಭಾಗವು ಯಾವ ಸಂದೇಹವಿಲ್ಲದೆ ಹೇಳುತ್ತದೆ. [34]The reasons that follow are adapted from John Franklin Carter, *A Layman's Harmony of the Gospels* (Nashville: Broadman Press, 1961), 41-42. [35]"ದೇವರು ಮರಿಯಳನ್ನು ಏಕೆ ಆಯ್ಕೆ ಮಾಡಿದನು" ಎಂಬ ಪಾಠವನ್ನು ಹೆಚ್ಚಿನ ವಿವರಗಳಿಗಾಗಿ ನೋಡಿ. [36]ಮರಿಯಳ ಮಾತುಗಳನ್ನು ಮಹಿಮೆಯುಳ್ಳವುಗಳೆಂದು ಲ್ಯಾಟಿನ್‌ನಲ್ಲಿ ಹೇಳಲಾಗಿದೆ. ಆಕೆಯ ಹಾಡಿನಲ್ಲಿರುವ ಮೊದಲನೆಯ ಪದವು ಕರ್ತನನ್ನು ಮಹಿಮೆ ಪಡಿಸುತ್ತ ಹೇಳ ಲಾಗಿದೆ. [37]ಯೋಹಾನನ ಜನನದ ಮುಂದಾಗಿ ಆಕೆ ಹೋಗಿರಬಹುದು. ಎಲೀಜಬೇತನ ಸಂಬಂಧಿಕರು ಬಂದಾಗ ಆಕೆಯ ಗರ್ಭಿಣಿಯ ಕುರಿತ ಪ್ರಶ್ನೆಗಳಿಗೆ ಸಮಾಧಾನ ಹೇಳಲು ಇಷ್ಟವಿಲ್ಲದೆ ಹೋಗಿರಬಹುದು. (ಅವರು ಮರಿಯಳ ಸಂಬಂಧಿಕರೂ ಆಗಿರಬಹುದು.) [38]ಆ ದಿನಗಳಲ್ಲಿ, ಸುನ್ನತಿಯ ದಿನದಂತೆ ಮಕ್ಕಳನ್ನು ದೇವರಿಗೆ ಸಮರ್ಪಿಸುವ ಸಂಪ್ರದಾಯವಿತ್ತು (ನೋಡಿ ಲೂಕ 2:21). [39]"ಕ್ರಿಸ್ತನು ಆಗಮಿಸಿದ ಲೋಕ" ಎಂಬ ಪಾಠವನ್ನು ನೋಡಿ.